**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 241/2023

**ಸಾಕ್ಷಿಯನ್ನು ದಿನಾಂಕ** 27.11.2025 **ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರೂಪಾ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ಗುರುದೇವರಾಧ್ಯ | ಸಿ.ಡಬ್ಲ್ಯೂ-7 |
| ವಯಸ್ಸು | : | 50 | |
| ಉದ್ಯೋಗ | : | ಗೃಹಿಣಿ | |
| ವಾಸ ಸ್ಥಳ | : | ವರುಣ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಚಾಸ 1 ನನ್ನ ಗಂಡನಿರುತ್ತಾರೆ. ಚಾಸ 12 ಜ್ಯೋತಿ ನನ್ನ ಮಗಳಿರುತ್ತಾಳೆ. ಚಾಸ 11 ವೈಭವ್ ನನ್ನ ಮೊಮ್ಮಗನಿರುತ್ತಾನೆ. ಚಾಸ 14 ಹೇಮಲತಾ ನನ್ನ ಮಗಳು. ಚಾಸ 13 ಮತ್ತು 15 ನನ್ನ ಅಳಿಯಂದಿರು. ಚಾಸ 17 ರಿಂದ 19 ನನ್ನ ಸಹೋದರರು. ನನ್ನ ಮೊದಲ ಮಗಳು, ಜ್ಯೋತಿ, 2 ನೇ ಮಗಳು ಹೇಮಲತಾ ಮತ್ತು 3 ನೇ ಮಗಳು ಪಲ್ಲವಿ. ನನ್ನ ಮೊದಲ ಮಗಳನ್ನು ಚಾಸ 13 ನಾಭೂಷಣರಾಧ್ಯ ರವರಿಗೆ ಮದುವೆ ಮಾಡಿರುತ್ತೇನೆ. ನನ್ನ 2 ನೇ ಮಗಳನ್ನು ಚಾಸ 15 ವಿಮಲಕುಮಾರ್ ರವರಿಗೆ ಮದುವೆ ಮಾಡಿರುತ್ತೇನೆ. ನನ್ನ ಕೊನೆ

ಮಗಳಾದ ಪಲ್ಲವಿಯನ್ನು ಲೋಕೇಶಆರಾಧ್ಯ ರವರಿಗೆ ಮದುವೆ ಮಾಡಿರುತ್ತೇನೆ. ಪಲ್ಲವಿ ಸಾಯುವ ಕಾಲಕ್ಕೆ 9 ವರ್ಷದ ಮೊದಲು ಆಕೆಯ ಮದುವೆಯಾಗಿತ್ತು. ಲೋಕೇಶಆರಾಧ್ಯ ನನ್ನ ತಂಗಿಯ ಮಗನಿದ್ದು ಆತನ ಸ್ವಂತ ಊರು ಬೆಂಗಳೂರಿನ ಬೇಗೂರು ಇದೆ. ಅವರು ವರುಣದಲ್ಲಿ ವಾಸವಿದ್ದರು. ಮದುವೆ ಕಾಲಕ್ಕೆ ಅವರು ಮೈಸೂರಿನ ಉದಯಗಿರಿಯಲ್ಲಿ ವಾಸವಿದ್ದರು. ಮದುವೆ ಬಳಿಕ 2 ವರ್ಷ ಲೋಕೇಶ್ ಅರಾಧ್ಯ ಮತ್ತು ನನ್ನ ಮಗಳು ಉದಯಗಿರಿಯಲ್ಲಿ ವಾಸವಿದ್ದರು. ನಂತರ ನನ್ನ ಮಗಳು ಗರ್ಭಿಣಿಯಾಗಿದ್ದರಿಂದ ಅವರು ವರುಣ ಗ್ರಾಮಕ್ಕೆ ಬಂದು ಡೆಲಿವರಿ ಆಗುವವರೆಗೆ ನಮ್ಮ ಮನೆಯಲ್ಲಿ ವಾಸವಿದ್ದರು. ನಂತರ ವರುಣದಲ್ಲಿ ಬಾಡಿಗೆಗೆ ಮನೆ ಮಾಡಿಕೊಂಡು ವಾಸವಿದ್ದರು. ನಂತರ ನನ್ನ ಅಳಿಯ ನನ್ನ ಮಗಳ ಬಗ್ಗೆ ಅನುಮಾನಪಟ್ಟು ಜಗಳ ಮಾಡುತ್ತಿದ್ದ. ನನ್ನ ಮಗಳಿಗೆ ದುಡ್ಡು ಕಾಸು, ಚಿನ್ನ ತೆಗೆದುಕೊಂಡು ಬಾ, ಮನೆ ಬರೆಸಿಕೊ ಎಂದು ಆರೋಪಿ ಹೇಳುತ್ತಿದ್ದ. ನಂತರ ಲೋಕೇಶಆರಾಧ್ಯ ವರುಣದಲ್ಲಿ ಸೈಟ್ ತೆಗೆದುಕೊಂಡಿದ್ದ. ಅಲ್ಲಿ ಮನೆ ಕಟ್ಟುತ್ತಿರುವಾಗ ಲೋಕೇಶಆರಾಧ್ಯ ರವರ ತಾಯಿ ಮರಣ ಹೊಂದಿದರು. ಮನೆ ಕಟ್ಟಲು 10 ಲಕ್ಷ ಸಾಲ ಪಡೆದಿದ್ದ. ನಂತರ ಲೋಕೇಶಆರಾಧ್ಯ ನನ್ನ ಮಗಳೊಂದಿಗೆ ಜಗಳ ಮಾಡಿಕೊಂಡು ಮನೆ ಬಿಟ್ಟು ಹೋಗಿದ್ದ. ಆ ಕಾಲಕ್ಕೆ ನಾವು ಮನೆಯನ್ನು ಪೂರ್ಣಗೊಳಿಸಿದೆವು. ಆನಂತರ ನನ್ನ ಮಗಳು ಅದೇ ಮನೆಯಲ್ಲಿ ವಾಸವಿದ್ದಳು. ಅವಳೊಂದಿಗೆ ಅವಳ ಮಗ, ನನ್ನ ತಂದೆ ತಾಯಿ ವಾಸವಿದ್ದರು. ಆ ಕಾಲಕ್ಕೆ

ಎರಡುವರೆ ಮೂರು ವರ್ಷ ಲೋಕೇಶಆರಾಧ್ಯ ಎಲ್ಲಿದ್ದಾನೆಂದು ಗೊತ್ತಿರಲಿಲ್ಲ. ನಂತರ ನನ್ನ ಅಣ್ಣನ ಮಗಳ ಮದುವೆ ನಿಶ್ಚಯವಾದ್ದರಿಂದ ಅದು ಗೊತ್ತಾಗಿ ಲೋಕೇಶಆರಾಧ್ಯ ವಾಪಸ್ ಬಂದಿದ್ದ. ಆ ಕಾಲಕ್ಕೆ ನನ್ನ ತಮ್ಮನ ಬಳಿ ನಾವು ಚನ್ನಾಗಿರುತ್ತೇವೆ ಆದರೆ ಬೇರೆ ಬಾಡಿಗೆ ಮನೆ ಮಾಡುತ್ತೆವೆ, ಈಗ ಕಟ್ಟಿದ ಮನೆಯಲ್ಲಿ ವಾಸವಿರುವುದಿಲ್ಲ ಎಂದು ಹೇಳಿದ. ಆಗ ನನ್ನ ತಮ್ಮ ಚನ್ನವೀರಣ್ಣ ಆತನಿಗೆ ನಾಡನಹಳ್ಳಿಯಲ್ಲಿ ಬಾಡಿಗೆ ಮನೆ ಮಾಡಿಕೊಟ್ಟಿದ್ದ. ಅಲ್ಲಿ ವಾಸವಿದ್ದಾಗಲೂ ಸಹ ನನ್ನ ಮಗಳು ತನ್ನ ಮೇಲೆ ಅನುಮಾನಪಟ್ಟು ಜಗಳ ಮಾಡುತ್ತಾನೆ ಎಂದು ಹೇಳುತ್ತಿದ್ದಳು. ಆ ಕಾಲಕ್ಕೆ ನನ್ನ ಮಗಳು ಟೈಲರಿಂಗ್ ಮಾಡಿ ಮನೆ ಬಾಡಿಗೆ ಕಟ್ಟುತ್ತಿದ್ದಳು. ಆ ಕಾಲಕ್ಕೆ ನನ್ನ ಮಗಳು ಅವನೊಂದಿಗೆ ಇರಲು ಸಾಧ್ಯವಿಲ್ಲ ಎಂದು ಹೇಳಿದಾಗ ನಾವು ಅನುಸರಿಸಿಕೊಂಡು ಹೋಗು ಎಂದು ಹೇಳುತ್ತಿದ್ದೆವು. ಆ ಕಾಲಕ್ಕೆ ನನ್ನ ತಮ್ಮ ಆತನಿಗೆ ಬುದ್ದಿ ಹೇಳುತ್ತಿದ್ದ. ನಂತರ ನನ್ನ ಮಗಳು ಹೇಮಲತಾ ನನಗೆ ಫೋನ್ ಮಾಡಿ ವಿಷಯ ತಿಳಿಸಿದಳು ಆ ಕಾಲಕ್ಕೆ ನಾನು, ನನ್ನ ಗಂಡ, ನಾಗಭೂಷಣರಾಧ್ಯ, ಗುರುದೇವರಾಧ್ಯ ಬೆಳಿಗ್ಗೆ 8 ಗಂಟೆಗೆ ನಾಡನಹಳ್ಳಿಯ ಮನೆಗೆ ಬಂದು ನೋಡಿದೆವು. ನಾವು ಬಂದಾಗ ಮನೆಯ ಬಾಗಿಲು ಬೀಗ ಹಾಕಿತ್ತು. ಆಗ ಮನೆ ಮಾಲೀಕರು ಇನ್ನೊಂದು ಕೀ ಬಳಸಿ ಬಾಗಿಲನ್ನು ತೆಗೆದುಕೊಟ್ಟರು. ಆ ಕಾಲಕ್ಕೆ ನನ್ನ ಮಗಳು ಹಾಲ್ ನಲ್ಲಿ ಅಂಗಾತ ಬಿದ್ದಿದ್ದಳು. ನಾವು ನೋಡಿದಾಗ ಮುಖದ ಮೇಲೆ ಉಗುರಿನ ಗುರುತು ಇತ್ತು, ಕುತ್ತಿಗೆಯಲ್ಲಿ ಉಗುರಿನ ಗುರುತು ಹಾಗೂ ರಕ್ತದ ಕಲೆಗಳು ಇದ್ದವು.

ನಾವು ನೋಡಿದಾಗ ನನ್ನ ಮಗಳು ಮರಣ ಹೊಂದಿದ್ದಳು. ಆ ಕಾಲಕ್ಕೆ ನಮ್ಮ ಅಳಿಯ ಮನೆಯ ಹೊರಗಡೆ ಇದ್ದ, ನಮ್ಮನ್ನು ನೋಡಿ ತನ್ನ ಮಗನನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿದ್ದ. ಆಗ ನನ್ನ ಗಂಡ ಪೋಲಿಸರಿಗೆ ದೂರು ನೀಡಿದರು. ನನ್ನ ಮಗಳು ಸಾಯುವ 3 ತಿಂಗಳ ಮೊದಲು ಸಚ್ಚಿದಾನಂದ ಆಶ್ರಮದ ಬಳಿ ಹೆಚ್ಚಿನ ಟೈಲರಿಂಗ್ ಡಿಸೈನ್ ಕಲಿಯಲು ಹೋಗುತ್ತಿದ್ದಳು. ಆ ಕಾಲಕ್ಕೆ ಒಂದು ದಿನ ಅವಳಿಗೆ ಬಸ್ ಸಿಗದಿದ್ದಾಗ ನನ್ನ ದೊಡ್ಡ ಮಗಳು ಅವಳನ್ನು ಕರೆದುಕೊಂಡು ಬರಲು ತನ್ನ ಗಂಡನನ್ನು ಕಳುಹಿಸಿದ್ದಳು. ಆ ಕಾಲಕ್ಕೆ ನನ್ನ ದೊಡ್ಡ ಅಳಿಯ ಪಲ್ಲವಿಯನ್ನು ಸಿದ್ದಾರ್ಥ ಲೇಔಟಿನ ಅವರ ಮನೆಗೆ ಕರೆದುಕೊಂಡು ಹೋಗಿದ್ದರು. ಆ ರೀತಿ ಕರೆದುಕೊಂಡು ಹೋಗುವಾಗ ಪಲ್ಲವಿಯ ಗಂಡ ನನ್ನ ಹೆಂಡತಿಯನ್ನು ಏಕೆ ಕರೆದುಕೊಂಡು ಹೋಗುತ್ತೀಯಾ ಎಂದು ನನ್ನ ದೊಡ್ಡ ಅಳಿಯನ ಜೊತೆ ಗಲಾಟೆ ಮಾಡಿದ್ದ. ಅವನಿಗೆ ಪಲ್ಲವಿಯ ಮೇಲೆ ಅನುಮಾನವಿದ್ದರಿಂದ ಆ ರೀತಿ ಗಲಾಟೆ ಮಾಡಿದ್ದ. ನ್ಯಾಯಾಲಯದ ಮುಂದಿರುವ ಆರೋಪಿಯೇ ನನ್ನ ಮಗಳು ಪಲ್ಲವಿಯ ಗಂಡ ಲೋಕೇಶಆರಾಧ್ಯ ಇರುತ್ತಾನೆ.

ದೂರು ನೀಡಿದ ಬಳಿಕ ನನ್ನ ಮಗಳ ಶವವನ್ನು ಜೆ.ಎಸ್.ಎಸ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. 14.6.2023 ರಂದು ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋ

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕ 14.6.2023 ರಂದು ನಾನು ನನ್ನ ಮೊಮ್ಮಗ ವೈಭವನನ್ನು ವಿಚಾರಿಸಿದಾಗ ಹಿಂದಿನ ದಿನ ರಾತ್ರಿ ನನ್ನ ಮಗಳು ಹಾಗೂ ಅಳಿಯನಿಗೆ ಹಣಕಾಸು ವಿಷಯವಾಗಿ ಜಗಳ ನಡೆದಿದ್ದಾಗಿ ಆಗ ನನ್ನ ಮಗಳು ರೂಂನಿಂದ ಎದ್ದು ಹೋಗಿ ಹಾಲ್‌ನಲ್ಲಿ ಮಲಗಿಕೊಂಡಿದ್ದಾಗಿ, ನಂತರ ನನ್ನ ಅಳಿಯ ಮಧ್ಯರಾತ್ರಿ ಪಲ್ಲವಿ ಮಲಗಿದ್ದ ಸ್ಥಳಕ್ಕೆ ಬಂದು ದಿಂಬನ್ನು ಇಟ್ಟು ಬಾಯಿಗೆ ಬಟ್ಟೆ ತುರುಕುವಾಗ ನನ್ನ ಮೊಮ್ಮಗ ಎಚ್ಚರಗೊಂಡು ಹಾಲ್‌ಗೆ ಬಂದು ಅಮ್ಮ ಅಮ್ಮ ಎಂದು ಕೂಗುವಾಗ ನನ್ನ ಅಳಿಯ ಅವನನ್ನು ಅಮ್ಮ ಮಲಗಿದೆ ಬಾ ಎಂದು ಹೊರಗಡೆ ಕರೆದುಕೊಂಡು ಹೋಗಿದ್ದಾಗಿ ನನ್ನ ಬಳಿ ಹೇಳಿದ ಎಂದು ನಾನು ಆಸ್ಪತ್ರೆ ಬಳಿ ಶವ ಮಹಜರ್ ಕಾಲಕ್ಕೆ ಪೋಲಿಸರಿಗೆ ಹೇಳಿದ್ದೆ ಎಂದರೆ ಆ ರೀತಿ ಮನೆ ಬಳಿ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಪುನಃ ಹೇಳುತ್ತಾರೆ ನಾನು ಮರೆತು ಹೋಗಿದ್ದೆ, ಆಸ್ಪತ್ರೆ ಬಳಿಯೇ ಆ ರೀತಿ ಹೇಳಿಕೆ ನೀಡಿರುತ್ತೇನೆ. ಆಗ ನಟೇಶಅರಾಧ್ಯ ನನ್ನ ಜೊತೆ ಇದ್ದ ಎಂದರೆ ನಿಜ. ಆ ಶವ ಮಹಜರ್ ಕಾಲಕ್ಕೆ ರಮೇಶಬಾಬು, ಸಿದ್ದರಾಜು, ಮಹೇಶ ಹಾಗೂ ನಟೇಶಆರಾಧ್ಯ ಹಾಜರಿದ್ದರು ಎಂದರೆ ನಿಜ. ಈಗ ನನ್ನ ಮೊಮ್ಮಗ ವೈಭವಆರಾಧ್ಯ ನನ್ನೊಂದಿಗೆ ವಾಸವಿದ್ದಾರೆ.

ಪಾಟೀ ಸವಾಲುಃ ಆರೋಪಿ ಪರ  ವಕೀಲರು ಚಾಸ 1, 7, 12 ರಿಂದ 15 ನ್ನು ಒಂದೇ ಬಾರಿಗೆ ಪಾಟೀ ಸವಾಲು ಮಾಡುವುದಾಗಿ ಅರ್ಜಿ ಸಲ್ಲಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು